ಅ) ಭಾರತ ಸರ್ಕಾರದ ನಿರ್ದೇಶನದನ್ವಯ ತೆರವು ಮಾಡದಂತೆ ಕ್ರಮ ಕೈಗೊಳ್ಳುವುದು ಸಾಧ್ಯವಿರುವುದಿಲ್ಲ.

ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನಕ್ಕೆ ವರಮಾನ ಮಿತಿ

1970 (2450) - ಶ್ರೀ ಮೋಹನ ಕೆ ಶೆಟ್ಟಿ (ಕುಮಟ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ ಪಡೆಯಲು ವಾರ್ಷಿಕ ವರಮಾನ ರೂ. 6000.00 ಮಿತಿಯನ್ನು ನಿಗದಿಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈಗಿನ ಬೆಲೆಯೇರಿಕೆ ಸ್ಥಿತಿಯಲ್ಲಿ ರೂ. 6000.00 ವಾರ್ಷಿಕ ವರಮಾನದ ಮಿತಿಯು ಅತಿ ಕನಿಷ್ಟವಾಗಿದ್ದು, ಕಡುಬಡವರೂ ಈ ಸೌಲಭ್ಯದಿಂದ ವಂಚಿತರಾಗಿದ್ದು, ವರಮಾನದ ಮಿತಿಯನ್ನು ಹೆಚ್ಚಿಸುವ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೆ; ಮನಗಂಡಿದ್ದರೆ, ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ವೃದ್ಧಾಪ್ಯ ವೇತನ ಪಡೆಯಲು ಅಭ್ಯರ್ಥಿಗೆ ವಾರ್ಷಿಕ ವರಮಾನದ ಮಿತಿ ಇರುವುದಿಲ್ಲ. ಆದರೆ ಅವರು ನಿರಾಶ್ರಿತರಾಗಿರಬೇಕಾಗುತ್ತದೆ. ಅಂದರೆ ತನ್ನ ಸ್ವಂತ ಅಥವಾ ಕುಟುಂಬದ ಸದಸ್ಯರ ಅಥವಾ ಇತರ ಆರ್ಥಿಕ ನೆರವಿನಿಂದ ನಿಗದಿತ ಜೀವನಾಧಾರ ಇಲ್ಲದಿರುವ ಅಥವಾ ಕ್ವಚಿತ ಜೀವನಾಧಾರವಿರುವ ನಿರಾಶ್ರಿತರ ವ್ಯಕ್ತಿಯಾಗಿರಬೇಕು. ಅಂಗವಿಕಲ ವೇತನ ಹಾಗೂ ವಿಧವಾ ವೇತನ ಪಡೆಯಲು 6,000 ರೂ.ಗಳ ವಾರ್ಷಿಕ ವರಮಾನ ಮಿತಿ ನಿಗದಿಪಡಿಸಲಾಗಿದೆ.

ಆ) ಅಂಗವಿಕಲ ವೇತನ ಹಾಗೂ ವಿಧವಾ ವೇತನ ಪಡೆಯಲು ವಾರ್ಷಿಕ ವರಮಾನದ ಮಿತಿಯನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು.

ಯುವಜನ ಸೇವೆ ಹಾಗೂ ಕ್ರೀಡೆ ಇಲಾಖೆಯಲ್ಲಿನ ಖಾಲಿ ಹುದ್ದೆಗಳ ಭರ್ತಿ

1971(2421) - ಶ್ರೀ ನಾಯಕ್ ಜೆ.ಡಿ (ಭಟ್ಕಳ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದ್ಯಂತ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆ ಅಧಿಕಾರಿಗಳ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಒಟ್ಟು ಎಷ್ಟು ಹುದ್ದೆ ಖಾಲಿ ಇದೆ - ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು?

ಇ) ಖಾಲಿ ಇರುವ ಹುದ್ದೆಗಳನ್ನು ಎಂದು ತುಂಬಲಾಗುವುದು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಯುಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ಜಿಲ್ಲಾ ಮಟ್ಟಗಳಲ್ಲಿ 27 ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳ ಹುದ್ದೆಗಳಿದ್ದು, ಯಾವುದೇ ಹುದ್ದೆಗಳು ಖಾಲಿಯಿರುವುದಿಲ್ಲ.

ಆ) ಕೇಂದ್ರ ಸರ್ಕಾರದಲ್ಲಿದ್ದ 105 ಎನ್.ಡಿ.ಎಸ್. ಇನ್‌ಸ್ಟ್ರಕ್ಟರ್‌ಗಳನ್ನು ರಾಜ್ಯದ ಸೇವೆಗೆ ವಿಲೀನಗೊಳಿಸಲಾಗಿದ್ದು ಇವರುಗಳು ತಾಲ್ಲೂಕು ಮಟ್ಟಗಳಲ್ಲಿ ಸಹಾಯಕ ಯುವಜನ ಸೇವಾ